"ಮಧುರ ಮಕ್ಕಳೇ - ಈ ಪತಿತ ಭಾರತವನ್ನು (ನಾ ಪಾಕ್) ಪಾವನ (ಪಾಕ್) ಭಾರತವನ್ನಾಗಿ ಮಾಡುವ ಸೇವೆಯಲ್ಲಿ ಇರಬೇಕು. ವಿಘ್ನವನ್ನು ಅಳಿಸಿ ಹಾಕಬೇಕು, ಹೃದಯವಿಧೀರ್ಣರಾಗಬಾರದು"

ಪ್ರಶ್ನೆ: ಗೃಹಸ್ಥ ವ್ಯವಾಹಾರದಲ್ಲಿ ಇರುತ್ತಾ ಯಾವ ಸ್ಮೃತಿಯಲ್ಲಿ ಇರುವುದು ಬಹಳ ಅವಶ್ಯಕತೆ ಇದೆ?

ಉತ್ತರ: ಗೃಹಸ್ಥ ವ್ಯವಹಾರದಲ್ಲಿ ಇರುತ್ತಾ ನಾವು ಈಶ್ವರೀಯ ವಿದ್ಯಾರ್ಥಿಗಳಾಗಿದ್ದೇವೆ ಎಂದು ಸ್ಮೃತಿ ಇರಲಿ. ವಿದ್ಯಾರ್ಥಿಗಳಿಗೆ ವಿದ್ಯೆ ಮತ್ತು ಶಿಕ್ಷಕರು ಸದಾ ನೆನಪಿರುತ್ತಾರೆ. ಅವರು ಎಂದೂ ಹುಡುಗಾಟಿಕೆಯಲ್ಲಿ ತಮ್ಮ ಸಮಯವನ್ನು ವ್ಯರ್ಥ ಮಾಡುವುದಿಲ್ಲ. ಅವರಿಗೆ ಸಮಯದ ಬಗ್ಗೆ ಬಹಳ ಎಚ್ಚರಿಕೆ ಇರುತ್ತದೆ.

ಪ್ರಶ್ನೆ: ಮನುಷ್ಯರಲ್ಲಿ ಎಲ್ಲದಕ್ಕಿಂತ ದೊಡ್ಡ ಅಜ್ಞಾನ ಯಾವುದು ಆಗಿದೆ?

ಉತ್ತರ: ಯಾರ ಪೂಜೆಯನ್ನು ಮಾಡುತ್ತಾರೆ ಅವರು ನಾಮ-ರೂಪದಿಂದ ದೂರ ಇದ್ದಾರೆ ಎಂದು ಹೇಳುತ್ತಾರೆ, ಇದು ಎಲ್ಲದಕ್ಕಿಂತ ದೊಡ್ಡ ಅಜ್ಞಾನವಾಗಿದೆ. ಮಂದಿರಗಳನ್ನು ಮಾಡಿ ಪೂಜಿಸುತ್ತಾರೆ, ಕರೆಯುತ್ತಾರೆ. ಅವರು ಹೇಗೆ ನಾಮ-ರೂಪದಿಂದ ಭಿನ್ನವಾಗಿರಲು ಸಾಧ್ಯವಿದೆ? ನೀವು ಎಲ್ಲರಿಗೂ ಪರಮಾತ್ಮನ ಸತ್ಯ ಪರಿಚಯವನ್ನು ಕೊಡಬೇಕು.

ಗೀತೆ: ಬಾಲ್ಯದ ದಿನವನ್ನು ಮರೆಯಬಾರದು..................

ಓಂ ಶಾಂತಿ. ಇದನ್ನು ಬೇಹದ್ದಿನ ತಂದೆ ಮಕ್ಕಳಿಗೆ ಶಿಕ್ಷಣ ಕೊಟ್ಟರು ಅಥವಾ ಎಚ್ಚರಿಕೆಯನ್ನು ಕೊಟ್ಟರು. ಯಾವಾಗ ರಾಮನವರಾಗಿದ್ದಾರೋ ಈ ಬಾಲ್ಯತನ ಅಥವಾ ಈಶ್ವರೀಯ ಬಾಲ್ಯತನವನ್ನು ಮರೆಯಬಾರದಾಗಿದೆ. ರಾಮನ ಮಗುವಾಗಿದ್ದು ಅಲ್ಲಿಂದ ರಾವಣನ ಕಡೆ ಹೋಗುವುದು ಈಗ ಆಗಬಾರದು. ನಂತರ ಬಹಳ-ಬಹಳ ಪಶ್ಚಾತ್ತಾಪ ಪಡಬೇಕಾಗುತ್ತದೆ. ಅದಕ್ಕೆ ಹೇಳಲಾಗುತ್ತದೆ - ಮಹಾನ್, ಮಹಾನ್ ಮೂರ್ಖರನ್ನು ನೋಡಬೇಕೆಂದರೆ ಇಲ್ಲೇ ನೋಡಬೇಕು. ಇಲ್ಲಿ ನೋಡಿ ಓದುವುದನ್ನೇ ಬಿಟ್ಟು ಹೋಗಿಬಿಡುತ್ತಾರೆ. ಅವರಿಗೆ ಎಂತಹ ಗತಿ ಬರಬಹುದೆಂದು ನೀವು ತಿಳಿಯಲು ಸಾಧ್ಯವಿದೆ. ಇಲ್ಲಿಯ ಮಹಾರಥಿಗಳು ಅವರನ್ನು ಗ್ರಹ ರೂಪಿ ಮಾಯೆ ತಿಂದುಬಿಡುತ್ತದೆ. ಈಗ ತಂದೆ ಸನ್ಮುಖದಲ್ಲಿ ಕುಳಿತು ತಿಳಿಸುತ್ತಾರೆ ಮಧುರಾತಿ ಮಧುರ ಮುದ್ದು ಮಕ್ಕಳೇ ಮಾಯೆ ಬಹಳ ಕಠಿಣವಾಗಿದೆ. ಬೇಹದ್ದಿನ ತಂದೆಯ ಕೈಯನ್ನು ಬಿಟ್ಟು ಹೋಗಬಾರದು. ಇವರು ಪರಮಪಿತ ಅತಿ ದೂರದಲ್ಲಿ ಇರುವಂತಹ ತಂದೆ ಪತಿತಪಾವನನಾಗಿದ್ದಾರೆ. ಇಂತಹ ತಂದೆಯ ಕೈಯನ್ನು ಎಂದೂ ಬಿಡಬಾರದು. ಇಲ್ಲವೆಂದರೆ ಬಹಳ ಅಳಬೇಕಾಗುತ್ತದೆ. ಬಹಳ ಒಳ್ಳೊಳ್ಳೆಯ ಮಕ್ಕಳು ಯಾರಿಗೆ ತಂದೆ ದೊಡ್ಡ-ದೊಡ್ಡ ಟೈಟಿಲ್ ಕೊಡುತ್ತಿದ್ದರು ಅವರೂ ಸಹ ಕೈಯನ್ನು ಬಿಟ್ಟುಬಿಡುತ್ತಾರೆ. ಕೈ ಬಿಟ್ಟು ಹೋಗಬಾರದೆಂದು ಬಾಬಾ ಕೆಲವರಿಗೆ ಹೆಚ್ಚು ಪ್ರೀತಿ ಮಾಡುತ್ತಾರೆ. ಹಾಡೂ ಸಹ ಬರೆಯಲ್ಪಟ್ಟಿದೆ. ಮಾಯೆ ನಿಮನ್ನು ಕೆಳಗೆ ಬೀಳಿಸುತ್ತದೆ ನಂತರ ಬಹಳ ಪಶ್ಚಾತ್ತಾಪ ಪಡಬೇಕಾಗುತ್ತದೆ. ಈ ರೀತಿ ಆಗಬಾರದು. ವಾಸ್ತವಿಕವಾಗಿ ಸತ್ಯ-ಸತ್ಯವಾದ ಯುದ್ಧ ನಿಮ್ಮದಾಗಿದೆ. ನೀವು ಮಾಯೆಯ ಮೇಲೆ ವಿಜಯವನ್ನು ಪಡೆಯುತ್ತೀರಿ. ಅವರಾದರೋ ಹಿಂದುಸ್ಥಾನ, ಪಾಕಿಸ್ಥಾನ ಎಂದು ಯುದ್ಧ ಮಾಡುತ್ತಾರೆ. ಅವರು ಇಬ್ಬರು ಸಹೋದರ-ಸಹೋದರರಾಗಿದ್ದಾರೆ. ಈಗ ನೀವು ಪತಿತರಿಂದ ಪಾವನರಾಗುತ್ತೀರಿ. ಪತಿತ ಸ್ಥಾನವನ್ನು ನೀವು ಪಾವನ ಸ್ಥಾನವನ್ನಾಗಿ ಮಾಡುತ್ತೀರಿ. ಪಾವನ ಸ್ಥಾನ ಇಲ್ಲಿ ಇಲ್ಲ. ಈ ಸಮಯ ಇಡೀ ಪ್ರಪಂಚ ಪತಿತ ಸ್ಥಾನವಾಗಿದೆ. ಪಾವನರು ದೇವೀ ದೇವತೆಗಳಾಗಿದ್ದಾರೆ. ನೀವು ಪತಿತ ಭಾರತವನ್ನು ಪಾವನ ಮಾಡುತ್ತಿದ್ದೀರಿ. ಈ ಪ್ರದರ್ಶನ ಮುಂತಾದದ್ದೆಲ್ಲವನ್ನು ಪತಿತರಿಂದ ಪಾವನ ಮಾಡಲು ಮಾಡುತ್ತೀರಿ. ನೀವು ಭಾರತದ ಸತ್ಯ ಸೇವೆಯನ್ನು ಮಾಡುತ್ತೀರಲ್ಲವೇ. ವಿಘ್ನವನ್ನೂ ಸಹ ಅಳಿಸಲಾಗುತ್ತದೆ, ಇದರಲ್ಲಿ ಸುಸ್ತಾಗಬಾರದು. ಯಾವುದೇ ಪರಿಸ್ಥಿತಿಯಲ್ಲಿ ಸರ್ವೀಸ್ ಅಂತೂ ಖಂಡಿತ ಮಾಡಲೇಬೇಕು. ಪತಿತರಿಂದ ಪಾವನರನ್ನಾಗಿ ಮಾಡುವುದೇ ನಿಮ್ಮ ಉದ್ಯೋಗವಾಗಿದೆ. ಮತ್ತೆ ಯಾವುದೇ ಮಾತಿನೊಂದಿಗೆ ನಿಮ್ಮ ಸಂಬಂಧವಿಲ್ಲ. ನಾನು ಎಷ್ಟು ಜನರನ್ನು ಪತಿತರಿಂದ ಪಾವನರನ್ನಾಗಿ ಮಾಡಿದೆ ಎಂದು ನೋಡಿಕೊಳ್ಳಬೇಕು. ಭಾರತ ಸ್ವರ್ಗವಾಗಿತ್ತು, ಪಾವನ ಜಗತ್ತಾಗಿತ್ತು, ಈ ಸಮಯದಲ್ಲಿ ಪತಿತ ಮತ್ತು ಪಾವನ ಇದರ ಬಗ್ಗೆ ಯಾರಿಗೂ ಜ್ಞಾನವಿಲ್ಲ. ಪಾವನ ಸ್ಥಾನ (ಪಾಕಿಸ್ಥಾನ) ಹೊಸ ಜಗತ್ತು, ಅದೇ ಹಳೆಯದಾದಾಗ ಪತಿತವಾಗುತ್ತದೆ. ಪತಿತ ತಮೋಪ್ರಧಾನವಾಗುತ್ತದೆ.

ಅಂದಾಗ ಆತ್ಮಿಕ ತಂದೆ ಕುಳಿತು ಆತ್ಮಿಕ ಮಕ್ಕಳಿಗೆ ಸನ್ಮುಖದಲ್ಲಿ ತಿಳಿಸುತ್ತಾರೆ. ಈಗ ನಾವು ಪವಿತ್ರ ಸ್ಥಾನವನ್ನು ಸ್ಥಾಪನೆ ಮಾಡುತ್ತಿದ್ದೇವೆಂದು ನಿಮ್ಮ ಬುದ್ಧಿಯಲ್ಲಿ ಇದೆ. ಭಾರತ ಪವಿತ್ರ ಸ್ಥಾನವಾಗಿತ್ತು ಈಗ ಅಪವಿತ್ರ ಸ್ಥಾನವಾಗಿಬಿಟ್ಟಿದೆ. ಹೊಸ ಮನೆ ನಂತರ ಹಳೆಯದಾಗುತ್ತದೆ. ಈ ತಿಳುವಳಿಕೆ ಹೊಸ ಪ್ರಪಂಚದಲ್ಲಿ ಇರುವುದಿಲ್ಲ. ಈಗ ನೀವು ಮಕ್ಕಳಿಗೆ ಅರಿತುಕೊಂಡಿದ್ದೀರಿ. ಲಕ್ಷಾಂತರ ವರ್ಷವೆಂದು ಹೇಳುತ್ತಾರೆ. ಕೊನೆಗಾದರೂ ಹಳೆಯದಾಗಬೇಕಲ್ಲವೇ. ಹಳೆಯದರ ಹೆಸರೇ ಕಲಿಯುಗವಾಗಿದೆ. ಹೊಸಯುಗ ಮತ್ತು ಹಳೆಯಯುಗವನ್ನು ಕೇವಲ ನೀವು ತಿಳಿದುಕೊಂಡಿದ್ದೀರಿ. ಈಗ ಹೊಸಯುಗ ಬರುತ್ತಾ ಇದೆ. ನಾವು ಮತ್ತೆ

ಪವಿತ್ರವಾಗಿ ಸ್ವರಾಜ್ಯವನ್ನು ಪಡೆಯಲು ತಂದೆಯ ಮೂಲಕ ಈ ಜ್ಞಾನವನ್ನು ಪಡೆದುಕೊಳ್ಳುತ್ತಿದ್ದೇವೆ. ವಿದ್ಯಾರ್ಥಿಗಳು ಎಂದಾದರೂ ತನ್ನ ವಿದ್ಯೆ ಮತ್ತು ಶಿಕ್ಷಕರನ್ನು ಮರೆಯಲು ಸಾಧ್ಯವಿದೆಯೇನು? ನೀವೂ ವಿದ್ಯಾರ್ಥಿಗಳಾಗಿದ್ದೀರಿ, ಗೃಹಸ್ಥವ್ಯವಹಾರದಲ್ಲಿ ಇರುತ್ತಾ ನಾವು ಓದುತ್ತಿದ್ದೇವೆ ಎಂಬುದು ನೆನಪಿರಲಿ. ಈ ಓದಿನಲ್ಲಿ ಬಹಳ ಸಮಯ ಹಿಡಿಯುತ್ತದೆ. ಮಧ್ಯದಲ್ಲಿ ಕೆಲವರು ಬಿಟ್ಟು ಹೋಗುತ್ತಾರೆ. ಕೆಲವರು ಸೋತು ಹೋಗುತ್ತಾರೆ. ಶಿವಬಾಬಾ ಥ್ರಿ/ವಾ ಬ್ರಹ್ಮಾ ಎಂದು ಮುಖದಿಂದಲೂ ಹೇಳುತ್ತಾರೆ ಹಾಗೂ ಬರೆಯುತ್ತಾರೆ. ತಂದೆಗೆ ಬಹಳ ಪ್ರೀತಿಯಿಂದ ಪತ್ರವನ್ನು ಬರೆಯುತ್ತಾರೆ ನಾವು ಜೀವಾತ್ಮರು ಪರಮಪಿತ ಪರಮಾತ್ಮನಿಗೆ ಪತ್ರವನ್ನು ಬರೆಯುತ್ತಿದ್ದೇವೆ. ಹೇ ಪರಮಾತ್ಮ! ರಕ್ಷಣೆ ಮಾಡಿ, ಶಾಂತಿಯನ್ನು ಕೊಡಿ ಎಂದು ಪ್ರಪಂಚದವರು ಕೂಗುತ್ತಿದ್ದಾರೆ. ತಂದೆಯ ವಿನಃ ಯಾರೂ ಶಾಂತಿಯನ್ನು ಕೊಡಲು ಸಾಧ್ಯವಿಲ್ಲ. ತಂದೆಯಂತೂ ಬರಲೇಬೇಕಾಗುತ್ತದೆ. ಅವರನ್ನು ಭಕ್ತರ ರಕ್ಷಕ ಎಂದು ಗಾಯನ ಮಾಡಲಾಗುತ್ತದೆ. ಜೀವನ್ಮುಕ್ತಿಯನ್ನು ಕೊಡಿ, ಶಾಂತಿಯನ್ನು ಕೊಡಿ, ಮುಕ್ತರನ್ನಾಗಿ ಮಾಡಿ ಎಂದು ಕೇಳುತ್ತಾರೆ. ನಾವು ಜೀವಿಸಿದ್ದಂತೆ ಮುಕ್ತರಾಗಿದ್ದೇವೆ, ಅವರಾದರೆ ಸತ್ಯಯುಗದಲ್ಲಿ ಇರುತ್ತಾರೆ. ಇಲ್ಲಿ ಜೀವನ ಬಂಧನವಿದೆ. ಈ ಎಲ್ಲಾ ಮಾತುಗಳನ್ನು ನೀವು ಚೆನ್ನಾಗಿ ತಿಳಿದುಕೊಂಡಿದ್ದೀರಿ ಮತ್ತು ಸ್ವಯಂ ತಂದೆ ತಿಳಿಸಿಕೊಡುತ್ತಿದ್ದಾರೆ. ಮತ್ತೆ ಯಾರದೇ ಬುದ್ಧಿಯಲ್ಲಿ ಡ್ರಾಮಾದ ರಹಸ್ಯವಿಲ್ಲ. ಮೂರು ಕಾಲದ ಆದಿ-ಮಧ್ಯ-ಅಂತ್ಯವನ್ನು ಯಾರೂ ತಿಳಿದುಕೊಂಡಿಲ್ಲ. ನೀವು ಎಲ್ಲವನ್ನು ತಿಳಿದುಕೊಂಡಿದ್ದೀರಿ ಆದರೆ ಸಾಧಾರಣ, ಗುಪ್ತವಾಗಿದ್ದೀರಿ. ಅವರು ಹೊರಗಡೆ ಹೋಗಿ ಸ್ಥೂಲವಾದಂತಹ ವ್ಯಾಯಾಮವನ್ನು ಮಾಡುವುದು ಕಲಿಯುತ್ತಾರೆ. ನಿಮ್ಮದು ಆತ್ಮೀಯ ವ್ಯಾಯಾಮವಾಗಿದೆ. ನೀವು ಯೋದರಾಗಿದ್ದೀರಿ, ಯುದ್ಧ ಮಾಡುವಂತಹವರು ಎಂಬುದು ಯಾರಿಗೂ ಸಹ ತಿಳಿದಿಲ್ಲ. ಮಹಾಭಾರತದ ಯುದ್ಧವನ್ನು ತೋರಿಸುತ್ತಾರೆ, ಅದು ಹೇಗೆ ಆಯಿತು? ಮಹಾಭಾರತಯುದ್ಧವನ್ನು ಭಗವಂತನೇ ಮಾಡಿಸಿದರು ಎಂದು ಹೇಳುತ್ತಾರೆ. ಈಗ ಭಗವಂತ ಹಿಂಸಾಯುದ್ಧವನ್ನು ಹೇಗೆ ಮಾಡಿಸುತ್ತಾರೆ? ಭಗವಂತನೇ ಯುದ್ಧವನ್ನು ಕಲಿಸಿದರು ರಾವಣನ ಮೇಲೆ ಜಯಗಳಿಸಲು. ನೀವು 16 ಕಲಾ ಸಂಪೂರ್ಣರು ಇದ್ದೀರಿ ಎಂದು ತಿಳಿಸುತ್ತಾರೆ. ನೀವು ಮೂಲವತನದಿಂದ ಅಶರೀರಿಯಾಗಿ ಬಂದು ಇಲ್ಲಿ ವಸ್ತ್ರವನ್ನು ಧಾರಣೆ ಮಾಡಿ ಮೊದಲು ಸತ್ಯಯುಗದಲ್ಲಿ ರಾಜ್ಯ ಮಾಡಿದ್ದಿರಿ. ಇದು ನೆನಪಿಗೆ ಬರುತ್ತದೆಯಲ್ಲವೇ? ಹೌದು ಬಾಬಾ ಈಗ ನಮಗೆ ಸ್ಮೃತಿಗೆ ಬಂದಿದೆ ನಾವೇ ದೈವೀರಾಜ್ಯದ ಮಾಲೀಕರಾಗಿದ್ದೆವು ಎಂದು ಹೇಳುತ್ತೀರಿ ಮತ್ತೆ ಸೋಲನ್ನು ಅನುಭವಿಸಿದೆವು, ಈಗ ನಾವು ಯುದ್ಧದ ಮೈದಾನದಲ್ಲಿ ಇದ್ದೇವೆ, ಮಾಯೆಯ ಮೇಲೆ ಖಂಡಿತ ವಿಜಯವನ್ನು ಪಡೆಯುತ್ತೇವೆ. ಕಾಮಚಿತೆಯ ಮೇಲೆ ಏರುವುದರಿಂದ ಮನುಷ್ಯರ ಮುಖ ಕಪ್ಪಾಗಿಬಿಡುತ್ತದೆ. ಕಪ್ಪು ಎಂಬ ಅಕ್ಷರಕ್ಕೆ ಬದಲಾಗಿ ಶ್ಯಾಮ ಎಂದು ಕರೆಯಲಾಗುತ್ತದೆ. ಕೃಷ್ಣ ಮತ್ತು ನಾರಾಯಣರಿಗೆ ನೀಲಿವರ್ಣವನ್ನು ತೋರಿಸುತ್ತಾರೆ. ಈ ರೀತಿ ಮನುಷ್ಯರು ಇರುವುದಿಲ್ಲ. ಮನುಷ್ಯರು ಕಪ್ಪು ಅಥವಾ ಬಿಳುಪಾಗಿ ಇರುತ್ತಾರೆ. ಕಬ್ಬಿಣಯುಗದವರನ್ನು ಕಪ್ಪಾದವರೆಂದು ಕರೆಯಲಾಗುತ್ತದೆ. ಲೌಕಿಕ ತಂದೆಯೂ ಸಹ ನೀನು ಕಪ್ಪು ಮುಖ ಮಾಡಿಕೊಂಡು ಕುಲಕ್ಕೆ ಕಳಂಕವನ್ನು ತರುತ್ತಿಯಾ ಎಂದು ಹೇಳುತ್ತಾರೆ. ಬೇಹದ್ದಿನ ತಂದೆ ನೀವು ಆಸುರಿ ಮತದಂತೆ ನಡೆದು ದೈವೀ ಕುಲದ ಕಳಂಕವನ್ನು ಮಾಡಿದಿರಿ, ಆದ್ದರಿಂದ ನೀವು ಕಪ್ಪಾಗಿದ್ದೀರಿ ಎಂದು ಹೇಳುತ್ತಾರೆ. ಸಂಪೂರ್ಣ ಕಪ್ಪಾಗಲು ಅರ್ಧ ಕಲ್ಪ ಇಡಿಸುತ್ತದೆ. ಸುಂದರರಾಗಲು ಒಂದು ಸೆಕೆಂಡ್ ಹಿಡಿಯುತ್ತದೆ. ಮಕ್ಕಳಿಗೆ ಡ್ರಾಮಾದ ಅದಿ-ಮಧ್ಯ-ಅಂತ್ಯ ಸ್ಮೃತಿಗೆ ಬಂದಿದೆ. ಬೇರೆ ಧರ್ಮದವರಿಗೆ ಈ ಸ್ಮೃತಿ ಬರಲು ಸಾಧ್ಯವಿಲ್ಲ. ನಿಮಗೆ ಮರೆತು ಹೋಗಿತ್ತು. ನಿಮಗೆ ಈಗ ಸ್ಮೃತಿಗೆ ಬಂದಿದೆ. ನೀವು ದೈವೀ ರಾಜಸ್ಥಾನಕ್ಕೆ ಮಾಲೀಕರಾಗಿದ್ದಿರಿ. ಇಲ್ಲಿ ಅನೇಕ ರಾಜರಿದ್ದರು. ಆದ್ದರಿಂದ ರಾಜಸ್ಥಾನವೆಂದು ಹೆಸರು ಇಡಲಾಗಿದೆ. ಈಗ ಪಂಚಾಯಿತಿ ರಾಜ್ಯವಿದೆ. ಮಹಾರಾಜಾ-ಮಹಾರಾಣಿಯರಾಗಲು ಈಗ ನೀವು ಪುರುಷಾರ್ಥ ಮಾಡುತ್ತಿದ್ದೀರಿ. ಡ್ರಾಮಾದ ಪ್ಲಾನ್ ಅನುಸಾರ ಹೀಗೆಯೇ ಆಗಿತ್ತು. ಸ್ವರ್ಗ ಸುತ್ತಿ ನರಕವಾಗುತ್ತದೆ. ಈಗ ನೀವು ಪತಿತ (ನಾಪಾಕ್) ಸ್ಥಾನದಿಂದ ಪಾವನ (ಪಾಕ್) ಸ್ಥಾನಕ್ಕೆ ಹೋಗಿ ರಾಜ್ಯ ಮಾಡಲು ಪುರುಷಾರ್ಥ ಮಾಡುತ್ತಿದ್ದೀರಿ. ನಿಮ್ಮ ಓದು ಸರಳವಾಗಿದೆ. ತಂದೆ ಮತ್ತು ಆಸ್ತಿಯನ್ನು ನೆನಪು ಮಾಡುವುದು. ನನ್ನೊಬ್ಬನನ್ನೇ ನೆನಪು ಮಾಡಿದ್ದೇ ಆದರೆ ನಿಮ್ಮ ವಿಕರ್ಮ ವಿನಾಶವಾಗುತ್ತದೆ, ರಾಜ್ಯವನ್ನು ನೆನಪು ಮಾಡಿದ್ದೇ ಆದರೆ ರಾಜ್ಯಭಾಗ್ಯ ಸಿಗುತ್ತದೆ ಎಂದು ತಂದೆಯು ಹೇಳುತ್ತಾರೆ. ಅಲ್ಲಿ ನಾನು ಎಮ್ಮೆ ಆಗಿದ್ದೇನೆ (ಗುರು ಶಿಷ್ಯನ ಕಥೆ) ಎಂದು ಹೇಳುತ್ತಾರೆ, ಆದರೆ ಈ ಮಾತು ಸತ್ಯವಲ್ಲ. ನೀವು ಆತ್ಮರು ಹೇಳುತ್ತೀರಿ ವಿಷ್ಣು ಆಗುತ್ತೇನೆ ಎಂದು ಹೇಗೆ ಆಗುತ್ತೀರಿ? ನನ್ನನ್ನು ನೆನಪು ಮಾಡಿ ಮತ್ತು ವಿಷ್ಣುಪುರಿ ರಾಜಧಾನಿಯನ್ನು ನೆನಪು ಮಾಡಿ ಎಂದು ತಂದೆಯು ಹೇಳುತ್ತಾರೆ. ಪ್ರವೃತ್ತಿ ಮಾರ್ಗವಾದ ಕಾರಣ ವಿಷ್ಣುವಿನ ಹೆಸರನ್ನು ತೆಗೆದುಕೊಳ್ಳಲಾಗುತ್ತದೆ. ಅಲ್ಲೂ ಸಹ ಲಕ್ಷ್ಮಿ-ನಾರಾಯಣರ ಸಿಂಹಾಸನದ ಹಿಂದೆ ವಿಷ್ಣುವಿನ ಚಿತ್ರದ ಗುರುತು ಇರುತ್ತದೆ. ಚಿತ್ರದಲ್ಲಿಯೂ ಸಹ ಈ ರೀತಿ ಮಾಡುತ್ತಾರೆ. ಬಾಬಾರವರು ರಹಸ್ಯವನ್ನು ತಿಳಿಸಿದ್ದಾರೆ-ಆ ಲಕ್ಷ್ಮೀ ನಾರಾಯಣರು ಚಕ್ರವನ್ನು ಸುತ್ತಿ ಬ್ರಹ್ಮಾ ಸರಸ್ವತಿ ಅಥವಾ ಜಗತ್ಪಿತ ಜಗದಾಂಬ ಆಗುತ್ತಾರೆ. ಬ್ರಹ್ಮಾರವರನ್ನು ಗ್ರೇಟ್-ಗ್ರೇಟ್ ಗ್ರಾಂಡ್ ಫಾದರ್ ಎಂದು ಹೇಳಲಾಗುತ್ತದೆ. ಶಿವನನ್ನು ತಂದೆ ಎಂದು ಹೇಳಲಾಗುತ್ತದೆ. ಎಲ್ಲಾ ಆತ್ಮರು ಸಹೋದರರಾಗಿದ್ದೇವೆ. ಗ್ರೇಟ್-ಗ್ರೇಟ್ ಗ್ರಾಂಡ್ ಫಾದರ್ (ಮನುಕುಲದ ಮುತ್ತಜ್ಜ) ಮನುಷ್ಯರಾಗುತ್ತಾರೆ. ಅಂದಾಗ ಈಗ ದೇಹಾಭಿಮಾನವನ್ನು ಬಿಟ್ಟು ಆತ್ಮಾಭಿಮಾನಿಗಳಾಗಬೇಕು. ಆತ್ಮಾಭಿಮಾನಿಯನ್ನಾಗಿ ಪರಮಾತ್ಮ ತಂದೆ ಮಾಡುತ್ತಾರೆ. ಇಲ್ಲಿ ನಿಮಗೆ ಜ್ಞಾನವಿದೆ. ಆತ್ಮಾಭಿಮಾನಿಗಳಾಗುತ್ತೀರಿ ನಂತರ ತಂದೆಯನ್ನೂ ಸಹ ನೆನಪು ಮಾಡುತ್ತೀರಿ ಏಕೆಂದರೆ ಆಸ್ತಿಯನ್ನು ತೆಗೆದುಕೊಳ್ಳಬೇಕು. ದೇವತೆಗಳು ಪುರುಷಾರ್ಥ ಮಾಡಿ ಹಿಂದಿನ ಜನ್ಮದಲ್ಲಿ ಆಸ್ತಿಯನ್ನು ತೆಗೆದುಕೊಂಡಿದ್ದಾರೆ. ನಮ್ಮ ತರಹ ಅವರು ನೆನಪು ಮಾಡುವ ಅವಶ್ಯಕತೆ ಇಲ್ಲ. ಮಕ್ಕಳು ಹೊಸ-ಹೊಸ ಪಾಯಿಂಟ್ಸ್ ಬುದ್ಧಿಯಲ್ಲಿ ಧಾರಣೆ ಮಾಡಬೇಕು. ಯುಕ್ತಿಯಂತೂ ಬಹಳಷ್ಟು ಸಿಗುತ್ತಿರುತ್ತದೆ. ಶ್ರೇಷ್ಠಾತಿಶ್ರೇಷ್ಠ ಸ್ಥಾನ ಯಾವುದು ಎಂಬ ಮಾತನ್ನು ಬುದ್ಧಿಯಲ್ಲಿ ಕುಳ್ಳರಿಸಿ.

ನಿರ್ವಾಣಧಾಮ. ನಾವಾತ್ಮರು ನಿರ್ವಾಣಧಾಮದ ನಿವಾಸಿಯಾಗಿದ್ದೇವೆ. ಅವರ ಸ್ಥಾನ ಶ್ರೇಷ್ಠಾತಿಶ್ರೇಷ್ಠವಾಗಿದೆ. ಹೆಸರೂ ಶ್ರೇಷ್ಠವಾಗಿದೆ, ಅವರ ಮಹಿಮೆಯೂ ಶ್ರೇಷ್ಠಾತಿಶ್ರೇಷ್ಠವಾಗಿದೆ. ಅವರು ಬರುವುದೂ ಸಹ ಭಾರತದಲ್ಲಿಯೇ ಆದ್ದರಿಂದ ಇಲ್ಲಿಯೇ ನೆನಪಾರ್ಥವನ್ನು ಮಾಡಲಾಗಿದೆ. ಯಾರ ನಾಮ-ರೂಪ ಇರುವುದೇ ಇಲ್ಲ. ಅಂತಹ ವಸ್ತು ಎಲ್ಲಿಂದ ಬರುತ್ತದೆ? ಅವರನ್ನು ಹೇಗೆ ಪೂಜಿಸಲಾಗುತ್ತದೆ. ಇದೂ ಸಹ ತಪ್ಪಲ್ಲವೇ. ಪರಮಾತ್ಮನನ್ನು ನಾಮ-ರೂಪದಿಂದ ನ್ಯಾರ ಎಂದು ಹೇಳುವುದು ಅಜ್ಞಾನವಾಗಿದೆ. ಶಿವರಾತ್ರಿಯನ್ನು ಭಾರತದಲ್ಲಿಯೇ ಆಚರಿಸುತ್ತಾರೆ. ಭಾರತವೇ ಪ್ರಾಚೀನದಲ್ಲಿ ಸತ್ಯಯುಗವಾಗಿತ್ತು ಈಗ ಇಲ್ಲ. ಅಂದಾಗ ಸತ್ಯಯುಗವನ್ನು ಅವಶ್ಯವಾಗಿ ತಂದೆಯೇ ಸ್ಥಾಪನೆ ಮಾಡಿರಬೇಕು. ನಂತರ ದುಃಖವನ್ನು ಯಾರು ಕೊಡುತ್ತಾರೆ? ಅದು ಯಾವಾಗಿನಿಂದ ಪ್ರಾರಂಭವಾಯಿತು? ಇದು ಯಾರಿಗೂ ತಿಳಿದಿಲ್ಲ. ತಂದೆ ಕುಳಿತು ತಿಳಿಸುತ್ತಾರೆ. ಅವರು 21 ಪೀಳಿಗೆಯವರೆವಿಗೂ ಬೇಹದ್ದಿನ ಆಸ್ತಿಯನ್ನು ಮತ್ತೆ ಕೊಡಲು ಬಂದಿದ್ದಾರೆ. ನೀವು ಕಲ್ಪ-ಕಲ್ಪವು ಇದೇ ಪುರುಷಾರ್ಥವನ್ನು ಮಾಡಿದ್ದೀರಿ. ಬೇಹದ್ದಿನ ಸುಖದ ಆಸ್ತಿ ಬೇಹದ್ದಿನ ತಂದೆಯಿಂದ ತೆಗೆದುಕೊಂಡಿದ್ದೀರಿ. ನಿಮ್ಮದು ಅಂತಿಮ ಜನ್ಮ ಆಗಿರುವುದರಿಂದ ಪವಿತ್ರವಾಗಿ ಭವಿಷ್ಯಕ್ಕೋಸ್ಕರ ಪೂರ್ಣ ಆಸ್ತಿಯನ್ನು ಏಕೆ ತೆಗೆದುಕೊಳ್ಳಬಾರದು? ಭಕ್ತರು ಭಗವಂತನನ್ನು ಆಸ್ತಿಯನ್ನು ಪಡೆಯಲು ನೆನಪು ಮಾಡುತ್ತಾರೆ. ಭಗವಂತ ಪತಿತಪಾವನ, ಸದ್ಗತಿದಾತನಾಗಿದ್ದಾರೆ. ನರನಿಂದ ನಾರಾಯಣರನ್ನಾಗಿ ಮಾಡುವಂತಹವರು ಮತ್ತೆ ಯಾರೂ ಮಾಡಲು ಸಾಧ್ಯವಿಲ್ಲ. ಸತ್ಯಯುಗದಲ್ಲಿ ಪ್ರಾರಂಭದಿಂದ ಲಕ್ಷ್ಮೀ-ನಾರಾಯಣರ ರಾಜ್ಯವಿರುತ್ತದೆ ಎಂದರೆ ಅವರು ಅವಶ್ಯವಾಗಿ ಹಿಂದಿನ ಜನ್ಮದಲ್ಲಿ ಪುರುಷಾರ್ಥವನ್ನು ಮಾಡಿದ್ದಾರೆ, ಆದ್ದರಿಂದ ತಂದೆ ಭವಿಷ್ಯದಲ್ಲಿ ಇಂತಹ ಪದವಿಯನ್ನು ಪಡೆಯಲು ಈಗ ನಿಮಗೆ ಪುರುಷಾರ್ಥವನ್ನು ಮಾಡಿಸುತ್ತಿದ್ದಾರೆ. ಪತಿತ ಜಗತ್ತಿನ ಅಂತ್ಯದಲ್ಲಿಯೇ ಬಂದು ಪಾವನರನ್ನಾಗಿ ಮಾಡುತ್ತಾರಲ್ಲವೇ. ಅದು ನಿರ್ವಿಕಾರಿ ಜಗತ್ತಾಗಿದೆ. ನಂತರ ಕಲೆಗಳು ಕಡಿಮೆ ಆಗುತ್ತಾ ಹೋಗುತ್ತವೆ. ಈಗ ವಿಕಾರಿ ಪ್ರಪಂಚವಾಗಿದೆ.

ಈ 5 ವಿಕಾರಗಳ ದಾನವನ್ನು ಕೊಡಿ ಮತ್ತು ಪವಿತ್ರರಾಗಿ ಎಂದು ತಂದೆಯು ಹೇಳುತ್ತಾರೆ. ನೆನಪನ್ನು ಮಾಡಿ ಮತ್ತು ಪವಿತ್ರರೂ ಸಹ ಆಗಿ. ಗೃಹಸ್ಥ ವ್ಯವಹಾರದಲ್ಲಿ ಇರುತ್ತಾ ಒಬ್ಬ ಶಿವತಂದೆಯನ್ನು ನೆನಪು ಮಾಡಿ ಮತ್ತು ಬೇರೆ ಯಾರನ್ನಾದರೂ ನೆನಪು ಮಾಡಿದ್ದೇ ಆದರೆ ವ್ಯಭಿಚಾರಿಗಳಾಗುತ್ತೀರಿ. ಭಕ್ತಿಮಾರ್ಗದಲ್ಲಿ ಗೃಹಸ್ಥವ್ಯವಹಾರದಲ್ಲಿ ಇರುತ್ತಾ ಎಲ್ಲರನ್ನು ನೆನಪು ಮಾಡುತ್ತಿರುತ್ತಾರೆ. ಅದು ವ್ಯಭಿಚಾರಿ ನೆನಪಾಗುತ್ತದೆ. ಅವರು ಪವಿತ್ರರೂ ಸಹ ಆಗುವುದಿಲ್ಲ. ತಂದೆ ಗೃಹಸ್ಥವ್ಯವಹಾರದಲ್ಲಿ ಇದ್ದು ನನ್ನೊಬ್ಬನನ್ನೇ ನೆನಪು ಮಾಡಿ ಎಂದು ಹೇಳುತ್ತಾರೆ. ಈ ಅಂತಿಮ ಜನ್ಮದಲ್ಲಿ ಕಮಲಪುಷ್ಪ ಸಮಾನರಾಗಿ ಕೇವಲ ನನ್ನೊಬ್ಬನನ್ನೇ ನೆನಪು ಮಾಡುತ್ತೀರಿ. ಈ ಒಂದು ಜನ್ಮದಲ್ಲಿ ನನಗೆ ಸಹಯೋಗ ಕೊಡಿ ಯಾರು ಸಹಾಯ ಮಾಡುತ್ತಾರೋ ಅವರೇ ಫಲವನ್ನು ಪಡೆಯುತ್ತಾರೆ. ನೀವು ಈಶ್ವರೀಯ ಸೇವಕರಾಗಿದ್ದೀರಿ. ತಂದೆ ಸ್ವಯಂ ಭಾರತಕ್ಕೆ ಸೇವೆಯನ್ನು ಮಾಡುತ್ತಾರಲ್ಲವೇ. ತಂದೆಯು ಹೇಳುತ್ತಾರೆ - ಮಕ್ಕಳೇ ನೀವು ಯೋಗ್ಯರಾಗಬೇಕು. ಗುಣಗಳೂ ಸಹ ಅವಶ್ಯವಾಗಿ ಬೇಕಾಗಿದೆ. ಇಲ್ಲಿ ಗುಣವಂತರಾಗಬೇಕು. ಮತ್ತೆ 21 ಜನ್ಮಗಳಿಗೆ ದೇವತೆ ಆಗಿ ರಾಜ್ಯವನ್ನು ಮಾಡುತ್ತೀರಿ. ತಂದೆ ತಿಳಿಸುತ್ತಾರೆ-ಕೃಷ್ಣನ ಚಿತ್ರ ಬಹಳ ಚೆನ್ನಾಗಿದೆ. ನರಕವನ್ನು ಒದೆಯುವುದು ಹಾಗೂ ಅಂಗೈಯಲ್ಲಿ ಸ್ವರ್ಗವನ್ನು ತೋರಿಸುತ್ತಾರೆ. ಭಾರತದಲ್ಲಿಯೇ ಈ ಕಾಯಿದೆ ಇರುವುದು. ಯಾರಾದರೂ ಸತ್ತು ಹೋದರೆ ಮುಖ ಊರಿನಕಡೆ, ಕಾಲು ಸ್ಮಶಾನದ ಕಡೆ ಮಾಡುತ್ತಾರೆ. ನಂತರ ಯಾವಾಗ ಸ್ಮಶಾನದ ಹತ್ತಿರ ಬರುತ್ತಾರೋ ಆಗ ಮುಖ ಸ್ಮಶಾನದಕಡೆಗೆ ತಿರುಗಿಸುತ್ತಾರೆ. ಈಗ ತಾವು ಜೀವಿಸಿದ್ದಂತೆಯೇ ಹೋಗಲು ತಯಾರು ಮಾಡಿಕೊಳ್ಳುತ್ತಿದ್ದೀರಿ ಅಂದಾಗ ತಮ್ಮ ಮುಖ ಹೊಸ ಪ್ರಪಂಚದ ಕಡೆ ಇರಬೇಕು. ಸುಖಧಾಮಕ್ಕೆ ಶಾಂತಿಧಾಮದ ಮೂಲಕ (ವಯಾ) ಹೋಗಬೇಕಾಗಿದೆ. ಇದು ಬೇಹದ್ದಿನ ಮಾತಾಗಿದೆ. ಹಳೆಯ ಪ್ರಪಂಚವನ್ನು ಹೊಡೆದು (ಬಿಟ್ಟು) ಹೊಸ ಪ್ರಪಂಚಕ್ಕೆ ಹೋಗುತ್ತಿದ್ದೀರಿ ಆದ್ದರಿಂದ ದುಃಖಧಾಮವನ್ನು ಮರೆಯಬೇಕಾಗಿದೆ. ಸುಖಧಾಮ ಮತ್ತು ಶಾಂತಿಧಾಮವನ್ನು ನೆನಪು ಮಾಡಿ. ಭಲೆ ನೀವು ದುಃಖಧಾಮದಲ್ಲಿ ಇದ್ದೀರಿ, ಆದರೆ ಸುಖಧಾಮವನ್ನು, ಶಾಂತಿಧಾಮವನ್ನು ನೆನಪು ಮಾಡಬೇಕು. ಅವ್ಯಭಿಚಾರಿ ಯೋಗ ಇರಬೇಕು. , ಒಬ್ಬ ತಂದೆ ವಿನಃ ಬೇರೆ ಯಾರೂ ಇಲ್ಲ. ಬಹಳ ಒಳ್ಳೆ ತಿಳುವಳಿಕೆ ಸಿಗುತ್ತದೆ. ಬಹಳಷ್ಟು ಶಾಸ್ತ್ರಗಳನ್ನು ಓದಿದ್ದರು ಅವರಿಗೆ ಅದೆಲ್ಲವನ್ನು ಮರೆತು ಬಿಡಿ ಮತ್ತು ಓದಿಸಿದ್ದವರನ್ನೂ ಸಹ ಮರೆತುಬಿಡಿ ಎಂದು ತಂದೆಯು ಈ ರೀತಿ ಹೇಳುತ್ತಾರೆ. ಈಗ ಏನೆಲ್ಲಾ ಕೇಳಿದ್ದೀರೋ ಅದೆಲ್ಲವನ್ನು ಮರೆತುಬಿಡಿ. ನಾನು ನಿಮಗೆ ಎಲ್ಲಾ ಶಾಸ್ತ್ರಗಳ ಸಾರವನ್ನು ತಿಳಿಸಿಕೊಡುತ್ತೇನೆ. ಸತ್ಯಖಂಡದ ಮಾಲೀಕರನ್ನಾಗಿ ಮಾಡುತ್ತೇನೆ. ಅವರು ನಿಮ್ಮನ್ನು ಅಸತ್ಯ ಖಂಡಕ್ಕೆ ಮಾಲೀಕರನ್ನಾಗಿ ಮಾಡುತ್ತಾರೆ. ಈಗ ನೀವೇ ಸರಿ ಯಾವುದು? ತಪ್ಪು ಯಾವುದು? ನಿಮ್ಮ ಚಿಕ್ಕಪ್ಪ, ಮಾಮಾ ಅಥವಾ ಶಾಸ್ತ್ರವಾದಿಗಳು ಸರಿಯೋ? ಎಂಬುದನ್ನು ನೀವೇ ತೀರ್ಮಾನ ಮಾಡಿ ಎಂದು ತಂದೆ ಹೇಳುತ್ತಾರೆ. ಆ ಯುದ್ಧ ಹದ್ದಿನದು ನಿಮ್ಮದು ಬೇಹದ್ದಿನದ್ದು. ಆದ್ದರಿಂದ ನೀವು ಬೇಹದ್ದಿನ ರಾಜ್ಯವನ್ನು ತೆಗೆದುಕೊಳ್ಳುತ್ತೀರಿ. ಈ ವಿಕಾರವನ್ನು ದಾನದಲ್ಲಿ ಕೊಟ್ಟುಬಿಡಿರಿ ಎಂದು ತಂದೆ ಹೇಳುತ್ತಾರೆ. ಈಗ ಪುರುಷಾರ್ಥವನ್ನು ಮಾಡದಿದ್ದರೆ ಬಹಳ ಪಶ್ಚಾತ್ತಾಪ ಪಡುತ್ತೀರಿ. ಆದ್ದರಿಂದ ಹುಡುಗಾಟವನ್ನು ಬಿಡಿ. ಸೇವೆಯಲ್ಲಿ ತೊಡಗಿರಿ. ಕಲ್ಯಾಣಕಾರಿಗಳಾಗಿ. ಈ ಕಲಿಯುಗದಲ್ಲಿ ಮಹಾನ್ ದುಃಖವಿದೆ. ಈಗ ದುಃಖದ ಬಹು ದೊಡ್ಡ ಪರ್ವತವೇ ಬೀಳುವುದಿದೆ. ನಂತರ ಸತ್ಯಯುಗದಲ್ಲಿ ಚಿನ್ನದ ಬೆಟ್ಟ ನಿಲ್ಲುತ್ತದೆ. ಒಳ್ಳೆಯದು.

ಮಧುರಾತಿ ಮಧುರ ಅಗಲಿ ಹೋಗಿ ಮರಳಿ ಸಿಕ್ಕಿರುವ ಮಕ್ಕಳ ಪ್ರತಿ ಮಾತ ಪಿತ ಬಾಪ್ದಾದಾರವರ ನೆನಪು ಪ್ರೀತಿ ಮತ್ತು ಗುಡ್

ಮಾರ್ನಿಂಗ್. ಆತ್ಮಿಕ ತ0ದೆಯ ಆತ್ಮಿಕ ಮಕ್ಕಳಿಗೆ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ತಂದೆ ಮತ್ತು ಆಸ್ತಿಯನ್ನು ನೆನಪು ಮಾಡುವ ಅತಿ ಸರಳ ಓದನ್ನು ಓದಬೇಕು ಹಾಗೂ ಓದಿಸಬೇಕು. ಅವ್ಯಭಿಚಾರಿ ನೆನಪಿನಲ್ಲಿ ಇರಬೇಕು. ಈ ಅಸತ್ಯ ಪ್ರಪಂಚವನ್ನು ಬುದ್ಧಿಯಿಂದ ಮರೆಯಬೇಕು.

2. ಈಶ್ವರೀಯ ಸೇವಕರಾಗಿ ಭಾರತವನ್ನು ಪತಿತದಿಂದ ಪಾವನವನ್ನಾಗಿ ಮಾಡುವ ಸೇವೆಯನ್ನು ಮಾಡಬೇಕು. ತಂದೆಗೆ ಸಂಪೂರ್ಣ ಸಹಯೋಗಿಗಳಾಗಬೇಕು.

ವರದಾನ: ಪ್ರತಿ ಘಳಿಗೆಯನ್ನು ಅಂತಿಮ ಘಳಿಗೆ ಎಂದು ತಿಳಿದು ಸದಾ ಎವೆರ್ರೆಡಿಯಾಗಿರುವಂತಹ ತೀವ್ರ ಪುರುಷಾರ್ಥಿ ಭವ
ಯಾವ ಮಕ್ಕಳು ತೀವ್ರ ಪುರುಷಾರ್ಥಿಯಾಗಿದ್ದಾರೆ ಅವರು ಪ್ರತಿ ಘಳಿಗೆಯನ್ನು ಅಂತಿಮ ಘಳಿಗೆ ಎಂದು ತಿಳಿದು ಎವರ್ರೆಡಿ ಯಾಗಿರುತ್ತಾರೆ. ಈ ರೀತಿ ಯೋಚಿಸುವುದಿಲ್ಲ ವಿನಾಶವಾಗಲು ಇನ್ನೂ ಸಮಯವಿದೆ, ನಂತರ ತಯಾರಾಗಿಬಿಡುವೆನು. ಆ ಅಂತಿಮ ಘಳಿಗೆಯನ್ನು ನೋಡುವ ಬದಲು ಇದನ್ನೇ ಯೋಚಿಸಿ ನನ್ನ ಅಂತಿಮ ಘಳಿಗೆಗೆ ಯಾವುದೇ ಭರವಸೆ ಇಲ್ಲ ಆದ್ದರಿಂದ ಎವರ್ರೆಡಿ, ನಿಮ್ಮ ಸ್ಥಿತಿ ಸದಾ ಉಪರಾಮವಾಗಿರಲಿ. ಎಲ್ಲದರಿಂದ ನ್ಯಾರಾ ಮತ್ತು ತಂದೆಗೆ ಪ್ರೀಯ, ನಷ್ಟಾ ಮೋಹ. ಸದಾ ನಿರ್ಮೋಹಿ ಮತ್ತು ನಿರ್ವಿಕಲ್ಪ, ನಿವ್ಯರ್ಥ್, ವ್ಯರ್ಥವೂ ಸಹ ಇರಬಾರದು ಆಗ ಹೇಳಲಾಗುವುದು ಎವರ್ರೆಡಿ.

ಸ್ಲೋಗನ್: ಸೂಕ್ಷ್ಮ ಸಮಯದಲ್ಲಿ ಪಾಸ್ ವಿತ್ ಆನರ್ ಆಗಬೇಕಾದಲ್ಲಿ ಅಡ್ಜಸ್ಟ್ ಆಗುವ ಶಕ್ತಿಯನ್ನು ಹೆಚ್ಚಿಸಿಕೊಳ್ಳಿ